# ಅಂತರರಾಷ್ಟ್ರೀಯ ಕ್ರೆಡಿಟ್ ಕಾರ್ಡುಗಳು:
# ನಿವಾಸಿಗಳಿಗೆ ಸೌಲಭ್ಯಗಳ ಉದಾರೀಕರಣ

ಮೇ 21, 2003

ಮತ್ತಷ್ಟು ಉದಾರೀಕರಣದತ್ತ ಮುನ್ನಡಿಯಿಡಲು ಭಾರತದಲ್ಲಿ ಅಧಿಕೃತ ವ್ಯಾಪಾರಿಯೊಂದಿಗೆ ಅಥವಾ ವಿದೇಶದ ಬ್ಯಾಂಕ್‌ನೊಂದಿಗೆ ವಿದೇಶಿ ಕರೆನ್ಸಿ ಖಾತೆಯನ್ನು ಇಟ್ಟುಕೊಂಡು ಬಂದಿರುವ ನಿವಾಸಿಯು, ಚಾಲ್ತಿಯಲ್ಲಿರುವ ವಿದೇಶಿ ವಿನಿಮಯ ನಿಯಂತ್ರಣಗಳ ಅನುಸಾರವಾಗಿ, ಸಾಗರೋತ್ತರ ಬ್ಯಾಂಕುಗಳು ಮತ್ತು ಇತರ ಪ್ರಖ್ಯಾತ ಏಜೆನ್ಸಿಗಳು ನೀಡಿದ ಅಂತರರಾಷ್ಟ್ರೀಯ ಕ್ರೆಡಿಟ್ ಕಾರ್ಡುಗಳನ್ನು (ಐಸಿಸಿಗಳು) ಪಡೆಯಲು ಮುಕ್ತರಾಗಿರುತ್ತಾರೆ. ಭಾರತದಲ್ಲಿ ಇಲ್ಲವೇ ವಿದೇಶದಲ್ಲಿ ಕಾರ್ಡಿಗೆ ಪ್ರತಿಯಾಗಿ ವಹಿಸಲಾದ ವೆಚ್ಚಗಳನ್ನು ಅಂಥ ಕಾರ್ಡನ್ನು ಹೊಂದಿರುವವನ ವಿದೇಶಿ ಕರೆನ್ಸಿ ಖಾತೆ/ಗಳು ಅಥವಾ ಹಣದ ರವಾನೆಗಳ ಮೂಲಕ ಯಾವುದಾದರೂ ಇದ್ದರೆ, ಭಾರತದಿಂದ ಅವುಗಳನ್ನು ಕಾರ್ಡುದಾರನು ಚಾಲ್ತಿ ಅಥವಾ ಉಳಿತಾಯ ಖಾತೆಯನ್ನು ಹೊಂದಿರುವ ಭಾರತದಲ್ಲಿರುವ ಬ್ಯಾಂಕ್ ಮೂಲಕ ಮಾತ್ರವೇ ನಿಧಿಗಳಿಂದ ಭರಿಸಬಹುದು. ಈ ಉದ್ದೇಶಕ್ಕಾಗಿ, ರವಾನಿಸಿದ ಹಣವನ್ನು ವಿದೇಶದಲ್ಲಿ ಕಾರ್ಡ್ ನೀಡುವ ಏಜೆನ್ಸಿಗೆ ಸಹಾ ನೇರವಾಗಿ ಮಾಡಬಹುದು ಮತ್ತು ಮೂರನೆ ಪಕ್ಷಕಾರನಿಗಲ್ಲ.

ಅನ್ವಯವಾಗುವ ಸಾಲದ ಮಿತಿಯು, ಕಾರ್ಡ್ ನೀಡುವ ಬ್ಯಾಂಕುಗಳು ನಿಗದಿಪಡಿಸಿದ ಮಿತಿಯಾಗಿರುತ್ತದೆ ಎಂದೂ ಸಹ ಸ್ಪಷ್ಟಪಡಿಸಲಾಗಿದೆ. ಈ ಸೌಲಭ್ಯದಡಿ, ಯಾವುದೇ ಹಣದ ರವಾನೆಗಳು ಇದ್ದರೆ, ಆ ಹಣದ ರವಾನೆಗಳಿಗೆ ಭಾರತೀಯ ರಿಸರ್ವ್ ಬ್ಯಾಂಕು ಹಣಕಾಸಿನ ಗರಿಷ್ಠ ಮಿತಿಯನ್ನು ನಿಗದಿಪಡಿಸಿರುವುದಿಲ್ಲ.

ಅಲ್ಲದೆ, ನಿವಾಸಿಗಳಿಗೆ ಐಸಿಸಿ ಉಪಯೋಗದ ಮೇಲೆ ಅನ್ವಯವಾಗುವ ನಿರ್ಬಂಧಗಳು, ಎಂದರೆ, ಲಾಟರಿ ಟಿಕೇಟುಗಳು, ನಿಷೇಧಿಸಿದ ಅಥವಾ ಬಹಿಷ್ಕರಿಸಿದ ನಿಯತಕಾಲಿಕೆಗಳಂತಹ ನಿಷೇಧಿಸಿದ ಬಾಬುಗಳ ಖರೀದಿ, ಬಾಜಿ ಪಂದ್ಯದಲ್ಲಿ ಭಾಗವಹಿಸುವಿಕೆ, ದೂರವಾಣಿ ಸಂಭಾಷಣೆ ಸೇವೆಗಳಿಗೆ ಸಂದಾಯ ಇತ್ಯಾದಿಗಳಿಗೂ ಅನ್ವಯವಾಗುತ್ತದೆ ಎಂದು ಸ್ಪಷ್ಟೀಕರಿಸಲಾಗಿದೆ.

ಅಲ್ಪನಾ ಕಿಲ್ಲಾವಾಲಾ
ಪ್ರಧಾನ ವ್ಯವಸ್ಥಾಪಕರು

ಪತ್ರಿಕಾ ಪ್ರಕಟಣೆ ಸಂ.: 2002–2003/1181